## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಅಫಜಲಪೂರ.

ಸಿಸಿ ನಂ. 262/2014

ರೇವೂರ ಪೋಲಿಸ್ ಠಾಣೆ

// ವಿರುದ್ಧ //

ಚಂದ್ರಕಾಂತ ಮತ್ತು ಇತರರು

## ಃದೋಷಾರೋಪಣೆಃ

1. ಚಂದ್ರಕಾಂತ ತಂದೆ ಮಹಾದೇವ ಸಜ್ಜನ,
   ವಃ47 ವರ್ಷ, ಉಃ ಲೆಕ್ಕ ಅಧೀಕ್ಷಕರು, ಸಾ|| ಗುಲ್ಬರ್ಗಾ
2. ಬಸವರಾಜ ತಂದೆ ಭೀಮಣ್ಣ ಮುಗದೆ
   ವಃ48 ವರ್ಷ, ಉಃ ಒಕ್ಕಲುತನ, ಸಾ|| ನೀಲೂರ
3. ವಹಾದೇವಿ ಗಂಡ ಬಸವರಾಜ ಮುಗದೆ
   ವಃ40 ವರ್ಷ, ಉಃ ಮನೆಲಕೆಲಸ, ಸಾ|| ನೀಲೂರ
4. ಔದಂಬರ ತಂದೆ ರಾಮ ನಿಕ್ಕಂ
   ವಃ50 ವರ್ಷ, ಉಃ ವ್ಯಾಪಾರ, ಸಾ|| ನೀಲೂರ
   ಆರೋಪಿಗಳಾದ ನಿಮ್ಮ ಮೇಲೆ.....

ನಾನು ಪ್ರಶಾಂತ ಬಾದವಾಡಗಿ, ಬಿ.ಎ., ಎಲ್‌ಎಲ್‌ಬಿ (ಸ್ಪೇಷಲ್), ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅಫಜಲಪುರ. ಆರೋಪಿಸುವುದೇನೆಂದರೆ,

ಮೋಲನೇದಾಗಿ 1ನೇ ಆರೋಪಿಯಾದ ನೀನು ಅಫಜಲಪುರನಲ್ಲಿ 2010 ಮತ್ತು 2011ನೇ ಸಾಲಿನಲ್ಲಿ ತಾಲೂಕಾ ಪಂಚಾಯತಿಯ ಲೆಕ್ಕಾಧೀಕ್ಷಕರಾಗಿ ನಿರ್ವಹಿಸುತ್ತಿರುವ ಸಮಯದಲ್ಲಿ ಪಂಪು ಮತ್ತು ನೀರು ಸರಬರಾಜು ನಿರ್ವಾಹಣೆಗಾಗಿ ಬಿಡಗಡೆಯಾದ ಅನುದಾನದ ಡಿ.ಡಿ.ಗಳನ್ನು ಪಿ.ಡಿ.ಓ ಅಧಿಕಾರಿಗಳಿಗೆ ಕೊಡದೇ, ಸುತ್ತೋಲೆ ಮುಟ್ಟಿದ ಬಗ್ಗೆ ಈ ಹಿಂದೆ ಇದ್ದ ಪಿ.ಡಿ.ಓ ರವರುಗಳಿಂದ ಒಂದ ಹಾಳೆಯ ಮೇಲೆ ಸಹಿ ಪಡೆದುಕೊಂಡು ನಂತರ ಅವರ ಹೆಸರಿನ ಹಿಂಬದಿಯಲ್ಲಿ ಅವರಿಗೆ ಡಿ.ಡಿ. ಗಳನ್ನು ವಿತರಣೆ ಮಾಡಿದ ಹಾಗೆ 15 ಡಿ.ಡಿ. ನಂಬರಗಳ ಹಣದ ಮೊತ್ತ 6,89,175/- ರೂಪಾಯಿಗಳನ್ನು ನಮೂದಿಸಿಕೊಂಡು 2ನೇ ಆರೋಪಿಯ ಸಹಾಯದಿಂದ ನೀಲೂರಿನ ಗ್ರಾಮದ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ 3ನೇ ಆರೋಪಿಯು ಹೆಸರಿನಲ್ಲಿ ಹೊಂದಿದ್ದ ಖಾತೆ ನಂಃ 526ಕ್ಕೆ ಆ ಹಣವನ್ನು ಜಮಾ ಮಾಡಿಸಿ ಆನಂತರ ದಿನಾಂಕಃ 11.5.2011 ರಿಂದ 23.6.2011 ರ ಮಧ್ಯೆ ಆರೋಪಿ ನಂಃ1 ರಿಂದ 3 ರವರಾದ ನೀವು ನಿಮ್ಮ ಸ್ವಂತಕ್ಕೆ ಬಳಸಿಕೊಂಡು ಹಾಗೂ

ಗ್ರಾಮ ಪಂಚಾಯತ ಸದಸ್ಯರ ಗೌರವ ಧನವನ್ನು ಪಂಚಾಯತಿಗಳಿಗೆ ನೀಡಬೇಕಾದ ಡಿ.ಡಿ. ನಂ. 725018 ಮೊತ್ತ 96,000/- ರೂಪಾಯಿಗಳನ್ನು ಆರೊಪಿ ನಂಃ3ರವರ ಖಾತೆಗೆ ಜಮಾಮಾಡಿಸಿ, ಈ ಮೇಲ್ಕಂಡ ಹಣ ರೂ.6,89,175/- ಮತ್ತು ರೂ.96,000/-ಗಳ ಒಟ್ಟು ಮೊತ್ತ 7,85,175/- ರೂಪಾಯಿಗಳನ್ನು ನೀವು ನಿಮ್ಮ ಸ್ವಂತಕ್ಕೆ ಬಳಸಿಕೊಂಡು ಸರ್ಕಾರಕ್ಕೆ ವಂಚಿಸಿರುವ ಕಾರಣ ಭಾರತ ದಂಡ ಸಂಹಿತೆ ಕಲಂಃ 420 ಸಹವಾಚಕ 34ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ ಗ್ರಾಮ ಪಂಚಾಯತ ಸದಸ್ಯರ ಗೌರವ ಧನವನ್ನು ಪಿ.ಡಿ.ಓ.ಗಳಿಗೆ ನೀಡಬೇಕಾದ ಡಿ.ಡಿ. ನಂಃ 725001, 725013, 725008, 725005 ಮತ್ತು 725016 ಗಳ ಒಟ್ಟು ಮೊತ್ತ 2,88,000/- ರೂಪಾಯಿಗಳನ್ನು ಸಹ 1ನೇ ಆರೋಪಿಯಾದ ನೀನು ನೀಲೂರಿನ ಛತ್ರಪತಿ ಶಿವಾಜಿ ಸಹಕಾರಿ ಬ್ಯಾಂಕಿನಲ್ಲಿ ಆರೋಪಿ ನಂ4ರವರು ಹೊಂದಿದ್ದ ಖಾತೆ ನಂಃ 8606ಗೆ ಖಾತೆಗೆ ಜಮಾ ಮಾಡಿಸಿ, ನಂತರ ಆ ಹಣವನ್ನು ಡ್ರಾ ಮಾಡಿ ಸ್ವಂತಕ್ಕೆ ಬಳಸಿಕೊಂಡು ಸರ್ಕಾರಕ್ಕೆ ವಂಚನೆ ಮಾಡಿರುವ ಕಾರಣ ಭಾರತ ದಂಡ ಸಂಹಿತೆ ಕಲಂಃ 420 ಸಹವಾಚಕ 34ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಮೂರನೇಯದಾಗಿ 2ನೇ ಆರೋಪಿಯಾದ ನೀನು, ನೀಲೂರಿನ ವಿ.ಎಸ್.ಎಸ್.ಎಸ್.ಎನ್ ಬ್ಯಾಂಕಿನಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಾಕ್ಷಿ ನಂಃ11ರವರಾದ ಈರಣ್ಣಾ ರವರಿಗೆ ಪಿ.ಡಿ.ಓ ಹೆಸರಿನಲ್ಲಿದ್ದ ಡಿ.ಡಿ.ಗಳನ್ನು ಒತ್ತಾಯಪೂರ್ವಕವಾಗಿ ಆರೋಪಿ ನಂಃ3ರವರ ಖಾತೆಗೆ ಜಮಾ ಮಾಡುವಂತೆ ಜೀವ ಬೇದರಿಕೆ ಹಾಕಿರುವ ಕಾರಣ ಭಾರತ ದಂಡ ಸಂಹಿತೆ ಕಲಂಃ 506 ಸಹವಾಚಕ 34 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀ.

ಕೊನೇಯದಾಗಿ 1ನೇ ಆರೋಪಿಯಾದ ನೀನು ಲೋಕ ನೌಕರನಾಗಿ, ಆರೋಪಿತರ ನಂಃ 2 ರಿಂದ 4ರವರ ಜೊತೆಗೆ ಭಾಗಿಯಾಗಿ ಸರ್ಕಾರಕ್ಕೆ ನಂಬಿಕೆ ದ್ರೋಹ ಎಸಗಿರುವ ಕಾರಣ ಭಾರತ ದಂಡ ಸಂಹಿತೆ ಕಲಂಃ 409 ಸಹವಾಚಕ 34 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀ.

ದಿನಾಂಕಃ 25-08-2016. ಜೆಎಮ್ಎಫ್‌ಸಿ, ಅಫಜಲಪೂರ.

## ಆರೋಪಿಯ ಹೇಳಿಕೆ.

ಪ್ರ-1 ನಿಮಗೆ ಮೇಲೆ ಓದಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೆ?
ಉಃ

ಪ್ರ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುತ್ತಿರೋ?
ಉಃ

ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಹೇಳಿದ ಅರೋಪಣೆಗಳನ್ನು ಅರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರುಗಳು ನೀಡಿದ ಉತ್ತರವನ್ನು ಯತಾಸ್ಥಿತಿಯಲ್ಲಿ ಬರೆದುಕೊಂಡಿದ್ದು ನಿಜವಿರುತ್ತದೆ

ದಿನಾಂಕಃ25-08-2016. ಜೆಎಮ್ಎಫ್‌ಸಿ, ಅಫಜಲಪೂರ.